# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ 2013-14ನೇ ಸಾಲಿನ 2ನೇ ತ್ರೈಮಾಸಿಕ ಯೋಜನಾ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:-** 1) ದಿನಾಂಕ: 12-07-2013ರ ಪರಿಷ್ಕೃತ ಆಯವ್ಯಯ.

2) ಸರ್ಕಾರಿ ಆದೇಶ ಸಂಖ್ಯೆ: ಕೃಇ 18 ಕೃವಿಧಾ 2013, ದಿನಾಂಕ: 31-05-2013

3) ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರ ದಿನಾಂಕ: 16-07-2013ರ ಪತ್ರ ಸಂಖ್ಯೆ: ಹನಿಅ/ಯೋಜನೆ ಅನು/2013-14.

**** *** ****

**ಪ್ರಸ್ತಾವನೆ:-**

2013-14ನೇ ಸಾಲಿನ ಆಯವ್ಯಯದಲ್ಲಿ (ರೂ. 1300.00 + 1600) ಒಟ್ಟು ರೂ. 2900.00 ಲಕ್ಷಗಳ ಅನುದಾನವನ್ನು ಕೃಷಿ ಶಿಕ್ಷಣ ಹಾಗೂ ಕೃಷಿ ಸಂಶೋಧನೆಗಾಗಿ ನಿಗದಿಗೊಳಿಸಲಾಗಿತ್ತು. ಈ ಪೈಕಿ ಸರ್ಕಾರವು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 31-05-2013ರ ಆದೇಶದಲ್ಲಿ ರೂ. 725.00 ಲಕ್ಷಗಳನ್ನು 1ನೇ ತ್ರೈಮಾಸಿಕ ಅನುದಾನವನ್ನಾಗಿ ಬಿಡುಗಡೆ ಮಾಡಿರುತ್ತದೆ. ದಿನಾಂಕ: 12-07-2013ರಂದು ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ, ಮಾನ್ಯ ಮುಖ್ಯ ಮಂತ್ರಿಯವರು 2013-14ನೇ ಸಾಲಿಗೆ ಹೊಸ ಆಯವ್ಯಯವನ್ನು ಮಂಡಿಸಿದ್ದು, ಅದರಂತೆ ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ಯೋಜನೆ ಅನುದಾನವಾಗಿ:-

- ಲೆಕ್ಕಶೀರ್ಷಿಕೆ 2415-80-004-2-01-101 (ಕೃಷಿ ಸಂಶೋಧನೆ) – ರೂ. 1150.00 ಲಕ್ಷಗಳನ್ನು ಮತ್ತು
- ಲೆಕ್ಕಶೀರ್ಷಿಕೆ 2415-80-277-2-01-101 (ಕೃಷಿ ಶಿಕ್ಷಣ) – ರೂ. 1436.25 ಲಕ್ಷಗಳನ್ನು ನಿಗದಿಗೊಳಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ದಿನಾಂಕ: 16-07-2013ರ ಪತ್ರದಲ್ಲಿ ಎರಡನೇ ತ್ರೈಮಾಸಿಕ ಅವಧಿಗಾಗಿ ರೂ. 275.00 ಲಕ್ಷಗಳನ್ನು ಕೃಷಿ ಸಂಶೋಧನೆಗಾಗಿ ಹಾಗೂ ರೂ. 345.42 ಲಕ್ಷಗಳನ್ನು ಕೃಷಿ ಶಿಕ್ಷಣಕ್ಕಾಗಿ ಬಿಡುಗಡೆ ಮಾಡುವಂತೆ, ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ರವರು ವಿನಂತಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಕೃಷಿ ವಿಶ್ವವಿದ್ಯಾಲಯ ಧಾರವಾಡಕ್ಕೆ 2013-14ನೇ ಸಾಲಿಗೆ ನಿಗದಿಯಾಗಿರುವ ಯೋಜನೆ ಅನುದಾನ ರೂ. 2586.25 ಲಕ್ಷಗಳಲ್ಲಿ ಪ್ರತಿ ತ್ರೈಮಾಸಿಕ ಅವಧಿಗೆ 25%ರಷ್ಟು ಅನುದಾನ (ರೂ. 287.5 + ರೂ. 359.06) ರೂ. 646.56 ಲಕ್ಷಗಳನ್ನು ಬಿಡುಗಡೆ

ಮಾಡಬೇಕಿದ್ದು, ಆದರೆ ಈ ಹಿಂದೆ ಬಿಡುಗಡೆ ಮಾಡಲಾದ ಪ್ರಥಮ ತ್ರೈಮಾಸಿಕ ಕಂತಿನ ಅನುದಾನವನ್ನು ಹೆಚ್ಚಿಗೆ ನೀಡಿರುವುದರಿಂದ (ರೂ. 725.00 – ರೂ. 646.56 = ರೂ. 78.44) ರೂ. 646.56ಗಳಲ್ಲಿ ರೂ. 78.44 ಲಕ್ಷಗಳನ್ನು ಹೊಂದಾಣಿಕೆ ಮಾಡಿ ಉಳಿದಂತೆ ರೂ. 568.12 ಲಕ್ಷಗಳನ್ನು ಬಿಡುಗಡೆ ಮಾಡಲು ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರು ಸಹಮತಿಸಿದ್ದಾರೆ. ಅದರಂತೆ ಈ ಆದೇಶ:-

**ಸರ್ಕಾರದ ಆದೇಶ ಸಂಖ್ಯೆ: ಕೃಇ 18 ಕೃವಿಧಾ 2013, ಧಾರವಾಡ, ದಿನಾಂಕ: 21-09-2013**

ಕೃಷಿ ವಿಶ್ವವಿದ್ಯಾಲಯ, ಧಾರವಾಡಕ್ಕೆ 2013-14ನೇ ಸಾಲಿನಲ್ಲಿ ಕೃಷಿ ಸಂಶೋಧನೆಗಾಗಿ ಲೆಕ್ಕಶೀರ್ಷಿಕೆ 2415-80-004-2-01-101ರಡಿಯಲ್ಲಿ ರೂ. 250.00 ಲಕ್ಷಗಳು ಮತ್ತು ಲೆಕ್ಕಶೀರ್ಷಿಕೆ 2415-80-277-2-01-101 ರಡಿಯಲ್ಲಿ ಕೃಷಿ ಶಿಕ್ಷಣಕ್ಕಾಗಿ ರೂ. 318.12 ಲಕ್ಷಗಳು ಸೇರಿದಂತೆ ಒಟ್ಟು ರೂ.568.12 ಲಕ್ಷಗಳನ್ನು (ಐದು ನೂರ ಅರವತ್ತೆಂಟು ಲಕ್ಷದ ಹನ್ನೆರಡು ಸಾವಿರಗಳು ಮಾತ್ರ) ಎರಡನೇ ತ್ರೈಮಾಸಿಕ ಯೋಜನಾ ಅನುದಾನವಾಗಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲಾಗಿದೆ:-

- ಪ್ರತಿ ತ್ರೈಮಾಸಿಕ ಅನುದಾನವನ್ನು ಆಯಾ ತ್ರೈಮಾಸಿಕದ ಬಳಕೆ ಪ್ರಮಾಣ ಪತ್ರವನ್ನು ಒದಗಿಸಿ ಬಿಲ್ಲಿಗೆ ಮೇಲು ರುಜು ಪಡೆಯತಕ್ಕದ್ದು.
- ಸರ್ಕಾರವು ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡುವುದೋ ಅದೇ ಉದ್ದೇಶಕ್ಕಾಗಿ ಅನುದಾನವನ್ನು ಉಪಯೋಗಿಸತಕ್ಕದ್ದು.
- ಬಿಡುಗಡೆಯಾದ ಯೋಜನಾನುದಾನದ ಸಂಶೋಧನೆಯ ಪೈಕಿ ಶೇಕಡ 50ರಷ್ಟು ಹಣವನ್ನು ಸಂಶೋಧನೆ ಮತ್ತು ಅಭಿವೃದ್ಧಿ ಉದ್ದೇಶಗಳಿಗೆ ವಿನಿಯೋಗಿಸತಕ್ಕದ್ದು.
- ಸರ್ಕಾರವು ನೀಡಿದ ಸೂಚನೆ ಆದೇಶಗಳನುಸಾರ ಕೃಷಿ ವಿಶ್ವವಿದ್ಯಾಲಯದವರು ವೆಚ್ಚದಲ್ಲಿ ಕಟ್ಟುನಿಟ್ಟಾಗಿ ಮಿತವ್ಯಯವನ್ನು ಪಾಲಿಸತಕ್ಕದ್ದು.
- ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಸೂಕ್ತ ಸಮಯದಲ್ಲಿ ಮಹಾಲೇಖಪಾಲರ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.
- ಬಿಡುಗಡೆ ಮಾಡಲಾಗಿರುವ ಅನುದಾನವು ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಆರ್ಥಿಕ ಇಲಾಖೆಯು ನೀಡಬಹುದಾದ ಸೂಚನೆಗಳಿಗೆ ಒಳಪಟ್ಟಿರುತ್ತದೆ.
- ಆಯಾ ತಿಂಗಳಿಗೆ ಪ್ರತ್ಯೇಕ ಬಿಲ್ಲನ್ನು ಒದಗಿಸುವುದು.

2. ಬಿಡುಗಡೆಯಾಗಿರುವ ಅನುದಾನಕ್ಕೆ ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಇವರು ಸಲ್ಲಿಸುವ ಬಿಲ್ಲಿಗೆ ಮೇಲು ರುಜು ಮಾಡುವ ಅಧಿಕಾರವನ್ನು Regional Joint Director of Collegiate Education, Dharwad ಇವರಿಗೆ ನೀಡಲಾಗಿದೆ.

3. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2013, ದಿನಾಂಕ: 10-05-2013ರಲ್ಲಿ ಆಡಳಿತಾತ್ಮಕ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರ ಮತ್ತು ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ದಿನಾಂಕ: 07-09-2013ರ ಟಿಪ್ಪಣಿ ಸಂಖ್ಯೆ: ಕೃಇ 159 ಆಂಆಸ 2013ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಈ ಆದೇಶವನ್ನು ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಜೆ.ಆರ್. ವಿಶ್ವನಾಥಾಚಾರ್)**
**ಸರ್ಕಾರದ ಅಧೀನ ಕಾರ್ಯದರ್ಶಿ**
**ಕೃಷಿ ಇಲಾಖೆ (ಯೋಜನೆ)**

<u>ಇವರಿಗೆ</u>:-

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿತ 15 ಪ್ರತಿಗಳನ್ನು ಒದಗಿಸಲು.

<u>ಪ್ರತಿ</u>:-

1. ಮಹಾಲೇಖಪಾಲರು, (ಲೆಕ್ಕಪತ್ರ/ತನಿಖೆ) ಕರ್ನಾಟಕ, ಬೆಂಗಳೂರು.
2. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ.
3. ಕೃಷಿ ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
4. ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ.
5. ಉಪ ನಿರ್ದೇಶಕರು, ನೆಟ್‌ವರ್ಕ್ ಮೇನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು.
6. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ.
7. ಜಿಲ್ಲಾ ಖಜಾನಾಧಿಕಾರಿಗಳು, ಧಾರವಾಡ.
8. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳು, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4 & 5), ವಿಧಾನ ಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಜೆ.ಆರ್. ವಿಶ್ವನಾಥಾಚಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)